

ತಿಥಿ ಚಿತ್ರದ ದೃಶ್ಯ

# ನೆಳಲು ಬೆಳಕಿನ ಸಿನಿ ಚೈತ್ರ

ಕನ್ನಡ ಚಿತ್ರರಂಗದ ಪಾಲಿಗೆ 2016 ಸಮೃದ್ಧಿಯ ವರ್ಷ. ಸಂಖ್ಯೆ ಹಾಗೂ ಪ್ರಯೋಗಗಳ ದೃಷ್ಟಿಯಿಂದ ಹೊಸ ಫಸಲು ಎದ್ದು ಕಾಣಿಸಿದ ಈ ವರ್ಷ, ಅನೇಕ ಯುವಪ್ರತಿಭೆಗಳು ಚಿತ್ರರಂಗಕ್ಕೆ ಪರಿಚಯಗೊಂಡ ಅವಧಿಯೂ ಹೌದು.

★ಚ.ಹ. ರಘುನಾಥ



'ನೀರ್ ದೋಸೆ' ಚಿತ್ರದಲ್ಲಿ ಹರಿಪ್ರಿಯಾ

'ಅನುಭವವಿಲ್ಲದ ಆಡಿನ ಮರಿಯ ಆಕರ್ಷಕ ಕೇಕೆ'– ಇದು ಯುವಜನತೆಯ ಅಭಿವ್ಯಕ್ತಿಯ ಕುರಿತಂತೆ ತತ್ವಜ್ಞಾನಿಯೊಬ್ಬರ ಹೇಳಿಕೆ. ಈ ಮಾತು, 2016ರ ಕನ್ನಡ ಚಿತ್ರರಂಗದ ಸ್ಥಿತಿಗೆ ಹೇಳಿಮಾಡಿಸಿದಂತಿದೆ. ತರುಣ ಪ್ರತಿಭೆಗಳು ವರ್ಷಪೂರ್ತಿ ಸುದ್ದಿ ಮಾಡಿದ ವರ್ಷವಿದು. ಪ್ರೇಕ್ಷಕರು ಚಿತ್ರಮಂದಿರಗಳಿಗೆ ಮರಳುತ್ತಿರುವ ಸೂಚನೆ ಕಾಣಿಸಿದ ವರ್ಷವಿದು. ಚಿತ್ರೋದ್ಯಮದಲ್ಲಿ ಚೈತ್ರಋತು ಮರುಕಳಿಸಿತೇ ಎನ್ನುವ ಅನುಮಾನ ಉಂಟುಮಾಡುವಷ್ಟು ಹೊಸ ಹರಿವು ಕಂಗೊಳಿಸಿದ ವರ್ಷವಿದು. ಹಾಗಿದ್ದರೆ, 2016 ಕನ್ನಡ ಚಿತ್ರರಂಗದ ಪಾಲಿಗೆ ಸ್ಮರಣೀಯ ವರ್ಷವಾ? ಹೌದೆನ್ನುವುದರಲ್ಲಿ ಅನುಮಾನವಿಲ್ಲ. ಆದರೆ, ಈ ಆಕರ್ಷಕ ಕೇಕೆಯ ಆಳದಲ್ಲಿ ಅನುಭವದ ಕೊರತೆ ಇರುವುದನ್ನೂ ಗುರುತಿಸಬೇಕು.

ಕನ್ನಡ ಚಿತ್ರರಂಗದ ಎಂಟು ದಶಕಗಳ ಇತಿಹಾಸದಲ್ಲಿ 2016 ಸಂಖ್ಯಾ ದೃಷ್ಟಿಯಲ್ಲಿ ಮುಂಚೂಣಿಯಲ್ಲಿ ನಿಲ್ಲುವ ವರ್ಷ. ಸುಮಾರು 170 ಸಿನಿಮಾಗಳು ತೆರೆಕಂಡ ವರ್ಷವಿದು. ಒಂದು ವರ್ಷದ ಅವಧಿಯಲ್ಲಿ ಇಷ್ಟೊಂದು ಚಿತ್ರಗಳು ತೆರೆಕಂಡ ಮತ್ತೊಂದು ಉದಾಹರಣೆ ಸ್ಯಾಂಡಲ್‌ವುಡ್‌ನಲ್ಲಿಲ್ಲ. 'ನೋಟಿನ ರಗಳೆ' ಇಲ್ಲದೆ ಹೋಗಿದ್ದಲ್ಲಿ ಈ ಸಂಖ್ಯೆ ಇನ್ನೂರರ ಸಮೀಪ ಬಂದು ನಿಲ್ಲುತ್ತಿತ್ತು!

ತೆರೆಕಂಡ ಸಿನಿಮಾಗಳಲ್ಲಿ ನಾಲ್ಕನೇ ಒಂದು ಭಾಗದಷ್ಟು ಸಿನಿಮಾಗಳು ಬೇರೆ ಬೇರೆ ಕಾರಣಗಳಿಗಾಗಿ ಚಿತ್ರರಸಿಕರ ಗಮನಸೆಳೆದವು. 'ಕಿಲ್ಲಿಂಗ್ ವೀರಪ್ಪನ್', 'ರಿಕ್ಕಿ, 'ಲಾಸ್ಟ್ ಬಸ್', 'ದೇವರ ನಾಡಲ್ಲಿ', 'ವಿರಾಟ್', 'ಪ್ರಿಯಾಂಕ', 'ಶಿವಯೋಗಿ ಪುಟ್ಟಯ್ಯಜ್ಜ', 'ಗೇಮ್', '...ರೆ', 'ಕಿರಗೂರಿನ ಗಯ್ಯಾಳಿಗಳು', 'ಸಿಂಪಲ್ಲಾಗ್ ಇನ್ನೊಂದು ಲವ್ ಸ್ಟೋರಿ', 'ಚಕ್ರವ್ಯೂಹ', 'ತಿಥಿ', 'ಇಷ್ಟಕಾಮ್ಯ', 'ಸ್ಟೈಲ್ ಕಿಂಗ್', 'ಯು ಟರ್ನ್', 'ಅಪೂರ್ವ', 'ಕರ್ವ', 'ಸುಳಿ', 'ಗೋಧಿ ಬಣ್ಣ ಸಾಧಾರಣ ಮೈಕಟ್ಟು', 'ಜಗ್ಗು ದಾದಾ', 'ನಾನಿ', 'ಝೂಮ್', 'ಜಿಗರ್‌ಥಂಡ', 'ರನ್ ಆಂಟೋನಿ', 'ಪುಟ ತಿರುಗಿಸಿ ನೋಡು', 'ಸಂತೆಯಲ್ಲಿ ನಿಂತ ಕಬೀರ', 'ಕೋಟಿಗೊಬ್ಬ–2', 'ಮಡಮಕ್ಕಿ', 'ನೀರ್ ದೋಸೆ', 'ಮುಂಗಾರು ಮಳೆ–2', 'ದೊಡ್ಮನೆ ಹುಡ್ಗ', 'ಜಾಗ್ವಾರ್', 'ಇದೊಳ್ಳೆ ರಾಮಾಯಣ', 'ನಾಗರಹಾವು', 'ಸಂತು ಸ್ಟ್ರೈಟ್ ಫಾರ್ವರ್ಡ್', 'ಕಹಿ', 'ಮಮ್ಮಿ', 'ನಿರುತ್ತರ', 'ತರ್ಲೆ ವಿಲೇಜ್' – ಒಂದು ವರ್ಷದಲ್ಲಿ ಇಷ್ಟೊಂದು

